# ಸುಂದರ ವ್ಯಕ್ತಿತ್ವದ ಪಾಟೀಲರು

ಅರವತ್ತು ವಸಂತಗಳನ್ನು ದಾಟಿ ಮುನ್ನಡೆದಿರುವ ಶ್ರೀ ರಾಘವೇಂದ್ರ ಪಾಟೀಲರು ನನ್ನ ಆತ್ಮೀಯ ಮಿತ್ರರು. ಅವರು ನನಗೆ ನೀಡಿರುವ ಈ ಮೈತ್ರಿ ನಿರ್ವ್ಯಾಜವಾದುದು. ಅವರ ಈ ನಿರ್ವ್ಯಾಜ ಮೈತ್ರಿಯ ರುಚಿಯನ್ನು ಅವರೊಂದಿಗೆ ಔಪಚಾರಿಕ ಒಡನಾಟ ಹೊಂದಿದ ಯಾರೂ ಅನುಭವಿಸಿರುವ ಸಾಧ್ಯತೆ ಇದೆ. ಏಕೆಂದರೆ, ಅವರ ವ್ಯಕ್ತಿತ್ವದಲ್ಲಿ ಸ್ನೇಹಪರತೆ ಹಾಗೂ ಸಜ್ಜನಿಕೆಗಳು ಸಹಜವಾಗಿವೆ.

ಗುಂಪುಗಾರಿಕೆಯನ್ನೇ ಬಂಡವಾಳವಗಿರಿಸಿಕೊಂಡು ತಮ್ಮ ಹಿಂಬಾಲಕ್ವರಿಂದ ಓಲೈಸಿಕೊಳ್ಳುತ್ತಾ, ತಮ್ಮನ್ನು ಗುರುತಿಸಿಕೊಳ್ಳುತ್ತಾ ತಾವೇ ಬೆಳೆವ ಪರಾವಲಂಬಿ ಲೇಖಕರನ್ನು ಎಲ್ಲೆಲ್ಲೂ ಕಾಣುತ್ತಿರುವಾಗ ಇತರರನ್ನು ಬೆಳೆಸುವ ಪ್ರಯತ್ನದಲ್ಲಿ ತೊಡಗಿರುವ ಅಪರೂಪದ ತಳಿಯ ಸ್ನೇಹಮಯಿ ವ್ಯಕ್ತಿ ನನ್ನ ಈ ಮಿತ್ರರು ಎನ್ನಲು ನನಗೆ ಹೆಮ್ಮೆ ಎನ್ನಿಸುತ್ತದೆ.

ಕಥನ ಕಲೆ ಅವರಿಗೆ ಸಿದ್ಧಿಸಿದೆ. ಅವರು ತಮ್ಮದೇ ಆದ ಸ್ವತಂತ್ರ ಶೈಲಿಯನ್ನು ರೂಢಿಸಿ ಕೊಂಡಿದ್ದಾರೆ. ಅದಕ್ಕೆ ಅವರ 'ತೇರು' ಹಾಗೂ 'ದೇಸಗತಿ'ಗಳು ಸಾಕ್ಷಿಯಾಗಿವೆ. ಈ ಹಿನ್ನೆಲೆಯಲ್ಲಿ ಅವರು ಹಿರಿಯ ಲೇಖಕರು. ಅವರ ಬರವಣಿಗೆಯಲ್ಲಿ ಬೆಳಗಾವಿಯ ಸೊಗಡಿದೆ.

ಅವರು ಕನ್ನಡಕ್ಕೆ ತಮ್ಮ ಕಥೆಗಾರಿಕೆಯಿಂದ ಏನು ಮತ್ತು ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ಮೌಲ್ಯಮಾಪನ ಮಾಡುವ ಸಾಮರ್ಥ್ಯ ಹಾಗೂ ಅರ್ಹತೆಗಳು ನನಗಿಲ್ಲ. ಅದನ್ನು ಮಾಡಬಲ್ಲ ಸಾಮರ್ಥ್ಯವಿರುವವರು ಇದ್ದಾರೆ. ಇಂದಲ್ಲ ನಾಳೆ ಅಂತಹದೊಂದು ಮೌಲ್ಯಮಾಪನ ಕಾರ್ಯ ಆದೀತು. ಆಗಲಿ ಎಂದು ನಾನು ಹಾರೈಸುತ್ತೇನೆ.

ಅವರು ಪ್ರಕಾಶಕನ ಸಂಸ್ಥೆ–ಆನಂದಕಂದ ಗ್ರಂಥಮಾಲೆಯನ್ನು ಆರಂಭಿಸಿ ಕನ್ನಡದ ಕೆಲವೊಂದು ವಿಶಿಷ್ಟ ಕೃತಿಗಳನ್ನು ಹೊರತರುವ ಮೂಲಕ ಬಹುಮೌಲ್ಯವಾದ ಸೇವೆ ಮಾಡಿದ್ದಾರೆಂದು ನನಗೆ ತೋರುತ್ತದೆ. ಆ ಕೆಲಸ ಮಾಡುವಾಗ ಅಲ್ಲಿ ಒಂದು ವ್ಯಾಪಾರೀ ಬುದ್ಧಿಗಿಂತ ಒಬ್ಬ ಶ್ರೇಷ್ಠಮಟ್ಟದ ಕಲಾಕಾರನ ಬುದ್ಧಿ ಕೆಲಸ ಮಾಡಿರುವುದು ಕಾಣುತ್ತದೆ. ಆದ್ದರಿಂದಲೇ ಅವರ ಪ್ರಕಟಣೆಗಳಲ್ಲಿ ವೈವಿಧ್ಯತೆಯ ಜೊತೆಗೆ ಒಂದು ಅಚ್ಚುಕಟ್ಟುತನ,ಕಲೆಗಾರಿಕೆ, ಪೂರ್ಣತೆಯಿಂದ ಬರುವ ಸೌಂದರ್ಯ ಹಾಗೂ ಮೌಲಿಕತೆಗಳಿವೆ. ಪ್ರಕಾಶನದ ಗುಣಮಟ್ಟವನ್ನು ಉತ್ತಮವಾಗಿರಿಸಲು ಅವರು ಸತತವಾಗಿ ದುಡಿಯುತ್ತಾರೆ. ಪ್ರಕಾಶನ ಹಾಗೂ ಕಥನ ಕಲೆಗಳು ಅವರಲ್ಲಿ ಫ್ಯಾಷನ್ ಆಗದೆ ಪ್ಯಾಷನ್ ಆಗಿದೆ.

ಒಟ್ಟಿನಲ್ಲಿ ಅವರ ಕುರಿತು ಹೇಳಬೇಕೆಂದರೆ, ಅವರೊಬ್ಬ ಸರಳ, ನಿರಾಡಂಬರ ವ್ಯಕ್ತಿ, ಸಜ್ಜನಿಕೆ, ಸ್ನೇಹಪರತೆಗಳನ್ನು ಮೇಳವಿಸಿಕೊಂಡಿರುವ ವ್ಯಕ್ತಿತ್ವ ಅವರದು. ಹಾಗಾಗಿ, ನನಗನ್ನಿಸುವುದೆಂದರೆ ಲೇಖಕರಾಗಿ, ಪ್ರಕಾಶಕರಾಗಿ ಗಳಿಸಿರುವುದಕ್ಕಿಂತ ತಮ್ಮ ಸಜ್ಜನಿಕೆಯಿಂದ, ಸ್ನೇಹಪರತೆಯಿಂದ ಅವರು ಗಳಿಸಿರುವ ಮಿತ್ರವೃಂದ ಬಹಳ ದೊಡ್ಡದು. ಮುಖವಾಡಗಳಿಲ್ಲದ ಸುಂದರ ವ್ಯಕ್ತಿತ್ವ ಅವರದು.

ಈ ಶುಭ ಸಂದರ್ಭದಲ್ಲಿ ಅವರಿಗೆ ಶುಭ ಕೋರುತ್ತೇನೆ.

ಪ್ರಭಾಕರ ಮಳಿಯ,
ಸಿಲ್ವರ್ ಡೇಲ್,೬೦೨, ಡೆಫೋಡಿಲ್  ವಿಂಗ್
ಬಿ.ವಿ.ಕಾವಡೆ ರೋಡ್, ಘೋರ್ಪಡಿ, ಪುಣೆ–೪೧೧೦೦೧
(ಮಹರಾಷ್ಟ್ರ)